# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

## ಕನ್ನಡ ರತ್ನ ಪರೀಕ್ಷೆ – ೨೦೧೯

**ಪ್ರಶ್ನೆಪತ್ರಿಕೆ – ೧**

## ಹಳಗನ್ನಡ ಸಾಹಿತ್ಯ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**೧. ಈ ಪದ್ಯದ ಭಾವಾರ್ಥ ಬರೆಯಿರಿ.** **೧೦**

ಏಕೆ ನಿಂದಿಹೆ ಪೋಗು ಸೌಮಿತ್ರಿ ಕೋಪಿಸನೆ ।
ಕಾಕುತ್ಥ್ಸನಿಲ್ಲಿ ತಳುವಿದೊಡೆ ನೆರವುಂಟು ತನ ।
ಗೀ ಕಾಡೊಳುಗ್ರ ಜಂತುಗಳಲ್ಲಿ ರಘುನಾಥನೇಕಾಕಿಯಾಗಿರ್ಪನು ॥
ಲೋಕದರಸೇಗೈದೊಡಂ ತನ್ನ ಕಿಂಕರರ್ ।
ಬೇಕು ಬೇಡೆಂದು ಪೇಳರೆ ಭರತ ಶತ್ರುಘ್ನ ।
ರೀ ಕೆಲಸಕೊಪ್ಪಿದರೆ ಹನುಮಂತನಿರ್ದಪನೆ ಪೇಳೆಂದಳಲ್ದಳಬಲೆ ॥

**೨. ಐದನ್ನು ಕುರಿತು ಸಂಕ್ಷಿಪ್ತ ಉತ್ತರ ಬರೆಯಿರಿ.** **೨೫**

ಅ) ಹಲ್ಮಿಡಿ ಶಾಸನದ ಪರಿಚಯ ಮಾಡಿಕೊಡಿ.

ಆ) ಕಾರ್ತೀಕನಿಗೆ ವೈರಾಗ್ಯ ಉಂಟಾದ ಪ್ರಸಂಗವನ್ನು ನಿರೂಪಿಸಿ.

ಇ) ನೀಲಾಂಜನೆಯ ನೃತ್ಯವು ಆದಿನಾಥನಲ್ಲಿ ಪರಿವರ್ತನೆಯನ್ನು ಹೇಗೆ ಉಂಟು ಮಾಡಿತು?

ಈ) ಕಪಿಯನ್ನು ತನ್ನ ಹೆಂಡತಿಯ ಕಡೆಗೆ ಕರೆದೊಯ್ಯಲು ಮೊಸಳೆಯು ಹೇಗೆ ಯತ್ನಿಸಿತು?

ಉ) ದೀಪಾಂಕುರದಂತೆ ತನ್ಮನಿಯಂ ಕಾಮಂ ಚಲಂ ಮಾಡಿದ – ಈ ಹೇಳಿಕೆಯನ್ನು ವಿವರಿಸಿ.

ಊ) ಬದಗನ ರೂಪವರ್ಣನೆ.

ಋ) ರಾಮನನ್ನು ಕಾಡಿಗಟ್ಟಿದ ವಿಷಯ ತಿಳಿದ ಸೀತೆಗಾದ ಆಘಾತ.

ಎ) ಮಕರಂದಾಜಿ ಹೇಗಿದ್ದಳು?

(ಪು.ತಿ.ನೋ.)



**೩. ಮೂರನ್ನು ಕುರಿತು ಟಿಪ್ಪಣಿ ಬರೆಯಿರಿ.** **೧೫**

ಅ) ವಿಜಿ ಅರಸ

ಆ) ಅಗ್ನಿರಾಜ

ಇ) ಅಕ್ಷಮಾಲೆ

ಈ) ಜನ್ನ

ಉ) ರತ್ನಾಕರವರ್ಣಿ

**೪. ಹತ್ತು ಪದಗಳಿಗೆ ಅರ್ಥ ಬರೆಯಿರಿ.** **೧೦**

ಅ) ಕಳ್ದೊನ್ ಋ) ಶಾಖಾಚರ
ಆ) ಎಟ್ಚಿತ್ತು ಎ) ಎರ್ದೆ
ಇ) ಕಸವರ ಏ) ಆರೋಗಣೆ
ಈ) ಬೆಡಂಗು ಐ) ಇಂಗಡಲು
ಉ) ಮೊನೆಯಂಬು ಒ) ಗರಟಿಗೆ
ಊ) ಎಣೆ ಓ) ಪೊಲ್ಲಮೆ

**೫. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **೪೦**

ಅ) ನೀಲಾಂಜನೆಯ ನೃತ್ಯವು ವೃಷಭದೇವನಿಗೆ ಬದುಕಿನ ನಾಟಕವನ್ನು ಅಭಿನಯಿಸಿ ತೋರಿಸಿದ ಬಗೆಯನ್ನು ವಿಶ್ಲೇಷಿಸಿ.

ಆ) ಮಹಾಶ್ವೇತೆಯ ಪ್ರೇಮ ನಿವೇದನೆ ಈ ಭಾಗದಲ್ಲಿ ಹೇಗೆ ಚಿತ್ರಿತವಾಗಿದೆ?

ಇ) 'ಚಿತ್ರಮಪಾತ್ರೇ ರಮತೇ ನಾರೀ' ಎಂಬ ಮಾತು ಅಮೃತಮತಿಗೆ ಹೇಗೆ ಅನ್ವಯಿಸುತ್ತದೆ? ಚರ್ಚಿಸಿ.

ಈ) ದ್ರೌಪದಿಯನ್ನು ಸಭೆಗೆ ಎಳೆತರುವ ಪ್ರಸಂಗವನ್ನು ಕವಿ ಹೇಗೆ ನಿರೂಪಿಸಿದ್ದಾನೆ? ವಿವರಿಸಿ.

ಉ) ಗಂಡ ತನ್ನನ್ನು ತೊರೆದನೆಂದು ತಿಳಿದಾಗ ಸೀತೆಯ ಮನಸ್ಸಿನ ಭಾವನೆಗಳು 'ಕಟ್ಟಡವಿಗಿಲ್ಲಿಗೇಕೈತಂದೆ' ಪದ್ಯಭಾಗದಲ್ಲಿ ಹೇಗ ಮೂಡಿಬಂದಿವೆ? ವಿಶದಪಡಿಸಿ.

ಊ) ಭಾವ ನಾದಿನಿಯರ ಸರಸ ಸಲ್ಲಾಪ ಪ್ರಸಂಗವನ್ನು 'ನಿನ್ನೂರ ದಿಕ್ಕ ನೋಡಿದರಾನು ಹೆಣ್ಣೆ' ಭಾಗದಿಂದ ಸಂಗ್ರಹಿಸಿ.

****

Created by demo-version of Universal Document Converter. Full version doesn't add this stamp. WWW.PRINT-DRIVER.COM

# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

## ಕನ್ನಡ ರತ್ನ ಪರೀಕ್ಷೆ – ೨೦೧೪

**ಪ್ರಶ್ನೆಪತ್ರಿಕೆ – ೨**

## ಹೊಸಗನ್ನಡ ಸಾಹಿತ್ಯ (ಕಾವ್ಯ ಮತ್ತು ಸಣ್ಣಕತೆ)

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**I. ಒಂದರ ಭಾವಾರ್ಥ ಬರೆಯಿರಿ.** ೦೫

೧) ಮರಳಬಹುದೆ? ಹೋಗಬಹುದೆ?
ಕರೆಯ ತೆರೆಯಪ್ಪಳಿಸಿ ಹೊಯ್ದು
ಹೊರಳಿ ಹೋದವು ಮಗಳ ಮೇಲೆ
ಕೊರಗಿನಲಿ ಅವನುಳಿದನು

೨) ಹಣ್ಣಾಗಬೇಕು ಮಗು
ಮೈಯೆಲ್ಲ ಮಾಗಿ ಹಣ್ಣಿನ ಸುಕ್ಕು ಬರುವವರೆಗೆ
ಪಕ್ವತನ ಬಿರಿದ ಬಾಳೆಹಣ್ಣಿದೆಯಲ್ಲ
ಅದರ ಹಾಗೇ ಕೊಂಚ ಬಾಗಬೇಕು

**II. ನಾಲ್ಕಕ್ಕೆ ಸಂದರ್ಭ ಸಹಿತ ವಿವರಿಸಿ.** ೧೨

೧) 'ತಣ್ಣನ್ನ ಜೋಮಾಲೆ ಕೊರಲೊಳಗಿತ್ತೋ'

೨) ಹಿಂದಿನಾ ಋಷಿಗಳೂ ಮಾನವರೆ ನಮ್ಮಂತೆ

೩) ಆಯ್ತು ಹೋಗಿ ಬನ್ನಿರಿ ಮತ್ತೆ ಬಂದಾಗ ಬರಬೇಕು ನೀವು ಇಲ್ಲಿ

೪) ಬನದ ಕರಡಿಗೆ ನಿಮ್ಮ ಭಗವದ್ಗೀತೆ ಬೇಡ !

೫) ಬಹಳ ದಿನ ಅವಿವಾಹಿತನಾಗಿಯೇ ಉಳಿದೆ

೬) ಎಲ್ಲರಿಗೂ ದಕ್ಕುವ ಎಲಚಿಯಾಗು

**III. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** ೦೮

೧) ಹುತ್ತರಿ ಹಾಡು
೨) ಜಿ.ಪಿ.ರಾಜರತ್ನಂ
೩) ಗಂಗಾಧರ ಚಿತ್ತಾಲ
೪) ಜಿ.ಎಸ್. ಶಿವರುದ್ರಪ್ಪ
೫) ಕೆ.ವಿ. ತಿರುಮಲೇಶ್
೬) ಅಪ್ಪ ಮತ್ತು ಗಾಂಧಿ

(ಪು.ತಿ.ನೋ.)



**IV. ಐದು ಪ್ರಶ್ನೆಗಳಿಗೆ ಉತ್ತರಿಸಿ.** ೨೫

೧) ಮದಲಿಂಗನ ಕಣಿವೆ ಕವಿತೆಯ ದುರಂತವನ್ನು ಚರ್ಚಿಸಿ.

೨) ಕನ್ನಡಾಭಿಮಾನವನ್ನು ಹೆಂಡಕುಡುಕ ರತ್ನನ ಪದಗಳು ಹೇಗೆ ಪಡೆಮೂಡಿಸುತ್ತವೆ?

೩) ಯೋಧ ಮತ್ತು ಹೆಂಗಸು ಕವಿತೆಯಲ್ಲಿನ ಪ್ರೀತಿ, ನಂಬುಗೆ ಆತಿಥ್ಯಗಳನ್ನು ವಿವರಿಸಿ.

೪) ನಗರ ಜೀವನದ ಯಾಂತ್ರಿಕ ವಿವರಗಳು 'ಮುಂಬೈ ಜಾತಕ' ಕವಿತೆಯಲ್ಲಿ ಹೇಗೆ ಚಿತ್ರಣಗೊಂಡಿದೆ?

೫) ಮೀನ ಯಾವ ವಸ್ತುಗಳನ್ನು ರೈಲ್ವೆ ನಿಲ್ದಾಣಕ್ಕೆ ತಂದಿದ್ದಳು?

೬) ಅವ್ವನ ಬದುಕಿನ ಮೂಲಸೂತ್ರ ಏನಾಗಿತ್ತು? ವಿವರಿಸಿ.

೭) ಬಯಕೆ ಕೈಗೂಡಿದರು ನಿರೂಪಕನಿಗೆ ಅನಿರೀಕ್ಷಿತ ಆಘಾತ ಹೇಗಿತ್ತು? 'ಅಮ್ಮ, ಆಚಾರ, ನಾನು' ಕವಿತೆಯ ಹಿನ್ನೆಲೆಯಲ್ಲಿ ವಿವರಿಸಿ.

**V. ಒಂದು ಪ್ರಶ್ನೆಗೆ ಉತ್ತರಿಸಿ.** ೧೦

೧) 'ಮದಲಿಂಗನ ಕಣಿವೆ' ಕವಿತೆಯಲ್ಲಿ ಸರಸದಲ್ಲಿ ಆರಂಭವಾದ ಕಥೆ ದುರಂತದಲ್ಲಿ ಕೊನೆಯಾಗುವ ಪರಿಯನ್ನು ಪರಿಶೀಲಿಸಿ.

೨) ಕಾಲ ಹಿಡಿಯಲು ಹೊರಟ ಮನುಷ್ಯಪ್ರಯತ್ನ ಚಿತ್ರಣವನ್ನು 'ಕಾಲ ನಿಲ್ಲುವುದಿಲ್ಲ' ಕವಿತೆಯ ಹಿನ್ನೆಲೆಯಲ್ಲಿ ವಿವರಿಸಿ.

## ಭಾಗ – ೨

**I. ಕೆಳಗಿನವುಗಳಲ್ಲಿ ಎರಡು ಪ್ರಶ್ನೆಗಳಿಗೆ ಉತ್ತರಿಸಿ.** ೨೦

೧) ಭಗ್ನಪ್ರೇಮಿಯಾಗಿ ವೆಂಕಟಸ್ವಾಮಿಯ ದುರಂತವನ್ನು ಚಿತ್ರಿಸಿ.

೨) ಮೊಮ್ಮಗನ ಪ್ರಾಣ ಉಳಿಸಿಕೊಳ್ಳಲು ಕರಿಸಿದ್ದೇಗೌಡ ಪಟ್ಟ ಪಾಡೇನು?

೩) ಗೌರಿಯ ಭಯ ಆತಂಕಕ್ಕೆ ಕಾರಣವಾದ ಸಂಗತಿಗಳನ್ನು 'ಅವನತಿ' ಕತೆಯ ಹಿನ್ನೆಲೆಯಲ್ಲಿ ಚರ್ಚಿಸಿ.

೪) 'ಕಸಬರಿಕೆ' ಕತೆಯಲ್ಲಿ ಬಂದಿರುವ ತುಳುನಾಡಿನ ಚಿಂತನೆಗಳನ್ನು ವಿವರಿಸಿ.

೫) ಆಧುನಿಕತೆಯು ಗ್ರಾಮ್ಯ ಬದುಕಿನ ಮೇಲೆ ಬೀರುವ ಪರಿಣಾಮ 'ಗಂಟೆ ಜೋಗಿ' ಕತೆಯಲ್ಲಿ ಹೇಗೆ ನಿರೂಪಿತವಾಗಿದೆ?

**II. ಎರಡಕ್ಕೆ ಟಿಪ್ಪಣಿ ಬರೆಯಿರಿ.** ೧೦

೧) ಕುವೆಂಪು
೨) ದೇವನೂರು ಮಹಾದೇವ
೩) ಭಾನು ಮುಸ್ತಾಕ್
೪) ಜೇನು ಹುಡುಗಿ
೫) ವಸುಧೇಂದ್ರ
೬) ಹೆಚ್. ನಾಗವೇಣಿ

**III. ಎರಡಕ್ಕೆ ಸಂದರ್ಭ ಸಹಿತ ವಿವರಿಸಿ.** ೧೦

೧) ಹಾಂಗಾದರೆ ಎಷ್ಟು ವರ್ಷ ಜೈಲಿನಲ್ಲಿದ್ದೆಯೋ ಲಿಂಗ?

೨) ನೆನದರೆ ಈಗಲೂ ಉಸಿರುಗಟ್ಟಿದಂತಾಗುತ್ತಾ, ಕೊರಳ ಸೆರೆಗಳು ಉಬ್ಬಿಕೊಳ್ಳುತ್ತವೆ ನೋಡು

೩) ಕಾಫಿಪುಡಿಯ ದೂಳಾದರು ಕಣ್ಣಿಗೆ ಬೀಳಲಿಲ್ಲ

೪) ಈ ಪೊತ್ತು ಖರೇವಂದ್ರೂ ನಮ್ಮೂರಿನ ಹುಡುಗಿ ಆದಿ ನೋಡು

೫) ನಾನ್ಯಾಕೆ ಕೇಳಿದ್ದೂ ಅಂದರೆ ನಮ್ಮ ಮನೆ ಹತ್ತಿರ ಏನಾದರೂ ಸುಡುಗಾಡಿತ್ತಾ

***



# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

## ಕನ್ನಡ ರತ್ನ ಪರೀಕ್ಷೆ – ೨೦೧೪

**ಪ್ರಶ್ನೆಪತ್ರಿಕೆ – ೩**

## ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ

[ ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**I. ಎರಡು ಪುಟಗಳಿಗೆ ಕಡಿಮೆ ಇಲ್ಲದಂತೆ ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** ೩೦

೧. ಸಾಹಿತ್ಯ ಎಂದರೇನು? ಅದರ ಸ್ವರೂಪವನ್ನು ತಿಳಿಸಿ.

೨. ರಸ ಎಂದರೇನು? ರಸ ನಿಷ್ಪತ್ತಿ ಹೇಗೆ ಆಗುತ್ತದೆ? ವಿವರಿಸಿ.

೩. ಭಾರತೀಯ ಹಾಗೂ ಪಾಶ್ಚಾತ್ಯ ಕಾವ್ಯಮೀಮಾಂಸೆಗಳಲ್ಲಿ ಇರುವ ಸಾಮ್ಯ ಹಾಗೂ ವ್ಯತ್ಯಾಸಗಳನ್ನು ತಿಳಿಸಿ.

**II ಎಂಟಕ್ಕೆ ಟಿಪ್ಪಣಿ ಬರೆಯಿರಿ.** ೪೦

೧) ನವರಸಗಳು
೨) ನಾಟ್ಯಶಾಸ್ತ್ರ
೩) ಪ್ರತಿಭೆ
೪) ಕಾವ್ಯಪ್ರಯೋಜನ
೫) ತೀ.ನಂ.ಶ್ರೀ
೬) ಕನ್ನಡ ವಿಮರ್ಶೆ
೭) ನೋಮ್ ಚೋಮ್‌ಸ್ಕಿ
೮) ಪಿಶ್‌ನ ಶೈಲಿಶಾಸ್ತ್ರ
೯) ರಾಚನಿಕ ಚಿಂತನೆ
೧೦) ಡಿ.ವಿ.ಜಿ.

**III ಇವುಗಳಲ್ಲಿ ಐದಕ್ಕೆ ಒಂದು ಪುಟಕ್ಕೆ ಕಡಿಮೆ ಇರದಂತೆ ಉತ್ತರಿಸಿ.** ೩೦

೧) ಕವಿಸಮಯ ಎಂದರೇನು? ಸಾಹಿತ್ಯದಲ್ಲಿ ಕವಿಸಮಯದ ಸ್ಥಾನವೇನು?

೨) ಧ್ವನಿ ಎಂದರೇನು? ಧ್ವನಿತತ್ವದ ಸಾರವನ್ನು ಪರಿಚಯಿಸಿ.

೩) ಶೈಲಿಶಾಸ್ತ್ರದ ಮುಖ್ಯ ಉದ್ದೇಶಗಳೇನು?

೪) ಕಾವ್ಯತತ್ವದ ಸ್ವರೂಪವನ್ನು ತಿಳಿಸಿ.

೫) ಲಾಂಗಿನಸ್ ಪ್ರತಿಪಾದಿಸಿರುವ 'ಸಬ್ಲೈಮ್' ತತ್ವದ ಸಾರವನ್ನು ತಿಳಿಸಿ.

೬) ವಿಮರ್ಶೆ ಎಂದರೇನು? ಅದರ ಲಕ್ಷಣಗಳನ್ನು ಗುರುತಿಸಿ

೭) ಕಾವ್ಯ ಮೀಮಾಂಸೆಯಲ್ಲಿ 'ವೇದಾಂತ'ದ ಸ್ಥಾನವನ್ನು ಪರಿಶೀಲಿಸಿ.

****

Created by demo-version of Universal Document Converter. Full version doesn't add this stamp. WWW.PRINT-DRIVER.COM

# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

**ಕನ್ನಡ ರತ್ನ ಪರೀಕ್ಷೆ – ೨೦೧೪**

**ಪ್ರಶ್ನೆಪತ್ರಿಕೆ – ೪**

## ಭಾಷೆ ರಚನೆ ಬಳಕೆ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**I. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** ೨೦

೧) ಕ್ಷೇತ್ರ ಭಾಷಾವಿಜ್ಞಾನಿಯ ಕಾರ್ಯವೈಖರಿಯನ್ನು ಪರಿಚಯ ಮಾಡಿಕೊಡಿ.

೨) ಭಾಷಾ ದ್ವಿರೂಪತ್ವ ಎಂದರೇನು? ಉದಾಹರಣೆ ಸಹಿತ ವಿವರಿಸಿ.

೩) ಲಿಪಿಪರಿಷ್ಕರಣೆ ಎಂದರೇನು? ಬಿ.ಎಂ.ಶ್ರೀ. ಅವರ ಅಭಿಪ್ರಾಯದೊಂದಿಗೆ ಚರ್ಚಿಸಿ.

೪) "ಅನ್ಯಭಾಷಾ ಶಿಕ್ಷಣ ಮಾತೃಭಾಷಾ ಶಿಕ್ಷಣದಷ್ಟು ಸುಲಭವಾದುದಲ್ಲ" ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿ.

೫) 'ಮಂಡ್ಯ ಕನ್ನಡ'ದ ವೈಶಿಷ್ಟ್ಯವನ್ನು ತಿಳಿಸಿ.

೬) 'ಪತ್ರಿಕೋದ್ಯಮದಲ್ಲಿ ಕನ್ನಡ ಭಾಷೆಯ ಬಳಕೆ' ಕುರಿತು ಸಂಕ್ಷಿಪ್ತವಾಗಿ ಬರೆಯಿರಿ.

**II. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** ೩೦

೭) ಸಾಮಾಜಿಕ ಭಾಷಾವಿಜ್ಞಾನದ ಚರಿತ್ರೆಯನ್ನು ತಿಳಿಸಿ.

೮) ಶಿಷ್ಟಭಾಷೆ ಎಂದರೇನು? ಸಾಮಾಜಿಕ ಭಾಷಾ ವಿಜ್ಞಾನಿಗಳ ಅಭಿಪ್ರಾಯದೊಂದಿಗೆ ವಿವರಿಸಿ.

೯) ಕನ್ನಡ ಭಾಷೆಯ ಅವಸ್ಥಾಂತರಗಳನ್ನು ಕುರಿತು ಬರೆಯಿರಿ.

((ಪು.ತಿ.ನೋ.)

ರ / ೪

೧೦) ಭಾಷಾವಾರು ಪ್ರಾಂತ್ಯದ ಬಗ್ಗೆ ಅಂಬೇಡ್ಕರ್ ಅವರ ವಿಚಾರಧಾರೆಯೇನು? ವಿವರಿಸಿ.

**III ಯಾವುದಾದರೂ ಎರಡು ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ.** ೩೦

೧೧) ಸಾಮಾನ್ಯ ಭಾಷಾವಿಜ್ಞಾನದ ಮೂರು ಶಾಖೆಗಳನ್ನು ಪರಿಚಯಿಸಿ.

೧೨) ಕನ್ನಡ ಭಾಷೆಯಲ್ಲಿ ನಡೆದಿರುವ ವಿವರಣಾತ್ಮಕ ಸಂಶೋಧನೆಯನ್ನು ಕುರಿತು ಬರೆಯಿರಿ.

೧೩) ಉಪಭಾಷೆಗಳು ಉಂಟಾಗಲು ಕಾರಣಗಳೇನು? ಕನ್ನಡದ ನಾಲ್ಕು ಪ್ರಮುಖ ಉಪಭಾಷೆಗಳ ಬಗ್ಗೆ ಬರೆಯಿರಿ.

೧೪) 'ಆಡಳಿತದಲ್ಲಿ ಕನ್ನಡ' – ಜಾರಿಗೆ ತರುವ ಬಗ್ಗೆ ಪ್ರಾಚೀನರ ಪ್ರಯತ್ನಗಳೇನು? ಹಾಗೂ ಆಧುನಿಕ ಕಾಲದ ಸ್ಥಿತಿ–ಗತಿಯನ್ನು ವಿವರಿಸಿ.

**IV. ಯಾವುದಾದರೂ ಐದು ವಿಷಯಗಳ ಬಗ್ಗೆ ಟಿಪ್ಪಣಿ ಬರೆಯಿರಿ.** ೨೦

೧೫) ಪಾರಿಭಾಷಿಕ ಪದಗಳು

೧೬) ಕನ್ನಡ ಭಾಷೆಯ ಏಕೀಕರಣ

೧೭) ವಿಭಕ್ತಿ ಪ್ರತ್ಯಯಗಳು

೧೮) ಲಿಪಿಸೃಷ್ಟಿ

೧೯) ಶೈಲಿ ವಿಜ್ಞಾನ

೨೦) ಸರ್ ವಿಲಿಯಂ ಜೋನ್ಸ್

***

Created by demo-version of Universal Document Converter. Full version doesn't add this stamp. WWW.PRINT-DRIVER.COM

# ಕನ್ನಡ ಸಾಹಿತ್ಯ ಪರಿಷತ್ತು

**ಬೆಂಗಳೂರು – ೧೮**

## ಕನ್ನಡ ರತ್ನ ಪರೀಕ್ಷೆ – ೨೦೧೪

**ಪ್ರಶ್ನೆಪತ್ರಿಕೆ – ೫**

## ಜಾನಪದ ಸ್ವರೂಪ – ಕನ್ನಡ ಸಂಸ್ಕೃತಿ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**'ಎ' ಭಾಗ**

**I. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ.** ೪೦

೧. ಜಾನಪದ ಎಂದರೇನು? ಜಾನಪದದ ಓದಿನಿಂದಾಗುವ ಪ್ರಯೋಜನಗಳನ್ನು ತಿಳಿಸಿ.

೨. ಒಗಟು ಎಂದರೇನು? ಒಗಟಿನ ವಿಧಗಳನ್ನು ಬರೆದು ವಿವರಿಸಿ.

೩. ಕಥನಗೀತೆ ಮತ್ತು ಲಾವಣಿಯನ್ನು ಕುರಿತು ಬರೆಯಿರಿ.

೪. ಕ್ಷೇತ್ರಕಾರ್ಯ ಎಂದರೇನು? ಕ್ಷೇತ್ರಕಾರ್ಯದ ವಿಧಾನಗಳು ಯಾವುವು? ವಿವರಿಸಿ.

೫. ಜಾನಪದ ಚಲನಶೀಲವಾದುದು – ಎಂಬುದನ್ನು ನಿದರ್ಶನ ಸಹಿತ ವಿವರಿಸಿ.

೬. ಜನಪದ ಗಾಯಕರಲ್ಲಿ ಎಷ್ಟು ವಿಧ? ವಿವರಿಸಿ.

೭. 'ಗಾದೆಗಳ ಗರ್ಭದಲ್ಲಿ ಸಕಲ ಜ್ಞಾನಕ್ಷೇತ್ರಗಳು ಅಡಗಿವೆ' ಎಂಬ ಹೇಳಿಕೆಗೆ ಅನುಗುಣವಾಗಿ ಗಾದೆಗಳನ್ನು ಉದಾಹರಣೆ ಸಹಿತ ವಿವರಿಸಿ.

**II. ಕೆಳಗಿನವುಗಳಲ್ಲಿ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** ೧೦

ಅ. ಜಾನಪದ ಲೋಕ

ಆ. ಜನಪದ– ಜಾನಪದ

ಇ. ಡಾ. ಜೀ.ಶಂ. ಪರಮಶಿವಯ್ಯ

ಈ. ಕಾರ್ಖಾನೆ ಜಾನಪದ

(ಪು.ತಿ.ನೋ.)

೮/೫

ಉ. ವಿಲಿಯಂ ಜೆ. ಥಾಮ್ಸ್

ಊ. ಜನಪದ ಗೀತೆಗಳು

**'ಬಿ' ಭಾಗ**

**III. ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ.** ೪೦

೧. ಸಂಸ್ಕೃತಿ ಎಂದರೇನು? ಕನ್ನಡ ಸಂಸ್ಕೃತಿ ಬೆಳೆದು ಬಂದ ಬಗೆಯನ್ನು ವಿವರಿಸಿ.

೨. ಜನಪದ ತ್ರಿಪದಿಗಳಲ್ಲಿ ಕನ್ನಡ ಸಂಸ್ಕೃತಿ ಹೇಗೆ ಅಭಿವ್ಯಕ್ತಿಗೊಂಡಿದೆ ತಿಳಿಸಿ.

೩. 'ಶಾಸನ ಸಾಹಿತ್ಯ ಅಭಿಜಾತ ಸಾಹಿತ್ಯದ ಮುಂಗೋಳಿ' ಹೇಗೆ? ವಿಶ್ಲೇಷಿಸಿ.

೪. ವಚನಗಳಲ್ಲಿ ಕನ್ನಡ ಸಂಸ್ಕೃತಿ ಹೇಗೆ ತುಂಬಿ ತುಳುಕಿದೆ ಎಂಬುದನ್ನು ವಿಶ್ಲೇಷಿಸಿ.

೫. ಸರ್ವಧರ್ಮಗಳ ಸಂಗಮಕ್ಷೇತ್ರ ಕರ್ನಾಟಕ ಎಂಬುದನ್ನು ಧಾರ್ಮಿಕ ಸಂಸ್ಕೃತಿಯ ಹಿನ್ನೆಲೆಯಲ್ಲಿ ವಿವರಿಸಿ.

೬. ರಾಷ್ಟ್ರಕೂಟರು ಮತ್ತು ಹೊಯ್ಸಳರ ವಾಸ್ತುಶಿಲ್ಪದ ವೈಶಿಷ್ಟ್ಯಗಳನ್ನು ಕುರಿತು ಬರೆಯಿರಿ.

೭. ಕನ್ನಡ ನಾಡಿನ ಚಿತ್ರಕಲೆಯ ಇತಿಹಾಸವನ್ನು ಕುರಿತು ಬರೆಯಿರಿ.

**IV. ಕೆಳಗಿನವುಗಳಲ್ಲಿ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** ೧೦

ಅ. ವಚನ ಸಾಹಿತ್ಯ

ಆ. ಚಾಲುಕ್ಯರು

ಇ. ಪಂಪ

ಈ. ಕನಕದಾಸರು

ಉ. ಜನಪದ ತ್ರಿಪದಿ

ಊ. ಕೈಲಾಸ ದೇವಾಲಯ

***

Created by demo-version of Universal Document Converter. Full version doesn't add this stamp. WWW.PRINT-DRIVER.COM